

ಪ್ರಕೃತಿಯ ಮಡಿಲಲ್ಲಿ ಏನೆಲ್ಲ ಅದ್ಭುತಗಳಿರುತ್ತವೆ ಎಂಬುದಕ್ಕೆ ಪ್ರಿಕೆಸ್ಟೋಲನ್ ಶಿಲೆ ಒಂದು ಉತ್ತಮ ಉದಾಹರಣೆ. 'ಪ್ರಿಕೆಸ್ಟೋಲನ್ ಕಲ್ಲು' ಅಥವಾ 'ಪ್ರವಾಚಕನ ಶಿಲಾಸನ' (ಪ್ರೀಚರ್ಸ್ ಚೇರ್) ಎಂದು ಕರೆಯಲಾಗುವ ಕೋಡುಗಲ್ಲು ನಾರ್ವೆ ದೇಶದ ಪೂರ್ವ ಭಾಗದಲ್ಲಿರುವ ಸ್ಟಾವೆಂಗರ್ ನಗರದಿಂದ ಸುಮಾರು 25 ಕಿ.ಮೀ. ದೂರದಲ್ಲಿದೆ. ಇದು ಲಿಸ್ಫೆ ಜೋರ್ಡೆನ್ ಎಂಬ ಬೆಟ್ಟದ ಮೇಲಿದ್ದು – 1982 ಅಡಿ ಎತ್ತರ, 82 ಅಡಿ ಉದ್ದ ಮತ್ತು 82 ಅಡಿ ಅಗಲವಾಗಿ ನದಿಯ ಕಡೆಗೆ ಚಾಚಿಕೊಂಡಿದೆ. ಈ ಎತ್ತರವೇ ಪ್ರಿಕೆಸ್ಟೋಲನ್ ವಿಶೇಷ. ಇದರ ಮೇಲೆ ನಿಂತು ಆಳದಲ್ಲಿ ಹರಿಯುತ್ತಿರುವ ನದಿ ಮತ್ತು ಹಚ್ಚ ಹಸುರಿನ ಪ್ರಕೃತಿಯ ಆಸ್ವಾದ ಬಲು ರೋಮಾಂಚಕ ಅನುಭವ.

ಕೋಡುಗಲ್ಲನ್ನು ಸ್ಥಳೀಯ ಭಾಷೆಯಲ್ಲಿ 'ಹಿಮ್ಲಾಂಟೋನಾ' ಎನ್ನುತ್ತಾರೆ. ಹಾಗೆಂದರೆ, ಬಡಗಿಯ ಕೆಲಸದಲ್ಲಿ ಬಳಸುವ ಉಪಕರಣ ಎಂದರ್ಥ. ಸ್ಥಳೀಯ ಸರ್ಕಾರ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕಲ್ಲಿಗೆ ಪ್ರಿಕೆಸ್ಟೋಲನ್ ಎಂದು ನಾಮಕರಣ ಮಾಡಿತು.

ಇಲ್ಲಿಗೆ ಬರಲು ನಾರ್ವೇಜಿಯನ್ ರಾಷ್ಟ್ರೀಯ ಹೆದ್ದಾರಿ 13 ರಲ್ಲಿ ಬಂದು, ನಂತರ ದೋಣಿಗಳಲ್ಲಿ ಪ್ರಯಾಣಿಸಿ ಬೆಟ್ಟದ ಬುಡ ತಲುಪಬೇಕಾಗುತ್ತದೆ. ಪ್ರಿಕೆಸ್ಟೋಲನ್ ತಲುಪುವಾಗ ಬಸ್ ಮೂಲಕ ನೀರಿನಡಿಯ ಸುರಂಗದಲ್ಲಿ ಸಾಗಿ ಬರುವ ಆಯ್ಕೆ ಇದೆ. ನಂತರದ ನಾಲ್ಕೈದು ಗಂಟೆಗಳ ಅವಧಿಯ 8 ಕಿ.ಮೀ. ಚಾರಣದ ನಂತರ ಬೆಟ್ಟದ ಮೇಲಿನ ಹರವಾದ ಸ್ಥಳಕ್ಕೆ ತಲುಪಿದರೆ ಅಲ್ಲೇ ಸ್ವರ್ಗ!

ಪ್ರಿಕೆಸ್ಟೋಲನ್ ಕಲ್ಲಿಗೆ ಸುಮಾರು 10 ಸಾವಿರ ವರ್ಷ ವಯಸ್ಸಾಗಿದ್ದು, ಅದು ಹಿಮಯುಗದ ಕಾಲದ್ದು ಎನ್ನುತ್ತಾರೆ ವಿಜ್ಞಾನಿಗಳು. ನೀರು ಹೆಪ್ಪಾಗುತ್ತಾ ನೀರ್ಗಲ್ಲುಗಳು ಶಿಖರದ ತುದಿ ತಲುಪಿ ಅಲ್ಲಿನ ಕೊರಕಲು, ಬಂಡೆಗಳ ಸಂದುಗಳಲ್ಲಿ ತೂರಿ ಕಲ್ಲುಗಳನ್ನು ಒಡೆದು ಈ ಆಕಾರ ಉಂಟಾಗಿರಬಹುದು ಎನ್ನಲಾಗಿದೆ. ಕಲ್ಲಿನ ಮೇಲೆ ನಿಂತಾಗ ಸುತ್ತಲೂ ಕಾಣುವ ಎತ್ತರದ ಪರ್ವತಗಳು, ಪಾತಾಳದಲ್ಲಿ ಹರಿಯುವ ನದಿ ರುದ್ರ ಭೀಕರ ಸೌಂದರ್ಯದ ದರ್ಶನ ಮಾಡಿಸುತ್ತದೆ. ಕೋಡುಗಲ್ಲಿನ ತುದಿಯಲ್ಲಿ ನಿಲ್ಲಲು ಗುಂಡಿಗೆ ಗಟ್ಟಿಯಿರಬೇಕು.

ಪ್ರಿಕೆಸ್ಟೋಲನ್ ನೋಡಲು ಪ್ರವಾಸಿಗರು ವರ್ಷವಿಡೀ ಆಗಮಿಸುತ್ತಾರೆ. ಆದರೆ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ವಾತಾವರಣ ತಂಪಾಗಿ, ಸ್ವಲ್ಪ ಬಿಸಿಲಿರುವ ಕಾರಣ ಪ್ರವಾಸಿಗರ ಸಂದಣಿ ಹೆಚ್ಚಾಗಿರುತ್ತದೆ. ಆಫ್ ಸೀಸನ್ ಚಳಿಯ ಸಮಯದಲ್ಲಿ ಜನಸಂದಣಿ ಕಡಿಮೆ ಇರುವ ಕಾರಣ ಸಾಹಸಿ ಪ್ರವೃತ್ತಿಯ ಪ್ರವಾಸಿಗಳು ಆಗಮಿಸುತ್ತಾರೆ.

ಪ್ರಿಕೆಸ್ಟೋಲನ್ ದರ್ಶನಕ್ಕೆ ಬರುವ ಪ್ರವಾಸಿಗರ ಅನುಕೂಲಕ್ಕಾಗಿ ಸರ್ಕಾರ ಪ್ರಿಕೆಸ್ಟೋಲನ್365ಡಾಟ್‌ಕಾಂ ಎಂಬ ಜಾಲತಾಣ ಆರಂಭಿಸಿ ಮಾಹಿತಿಗಳನ್ನು ನೀಡುತ್ತಿದೆ. ಮಾರ್ಗದರ್ಶಕರ ಸಹಾಯದೊಂದಿಗೆ ಪ್ರವಾಸ ಇದ್ದು ಈ ಆಯ್ಕೆ ಉತ್ತಮ ಎನ್ನಲಾಗುತ್ತದೆ. ಪ್ರಿಕೆಸ್ಟೋಲನ್‌ಗೆ ಆಗಮಿಸಲು ಸ್ಟಾವೆಂಗರ್ ನಗರದಿಂದ ಸಾಕಷ್ಟು ಬಸ್ ಸೌಲಭ್ಯ ಇದೆ. ಸ್ವಂತ ವಾಹನಗಳಲ್ಲಿ ಬರುವವರಿಗೆ 1000 ಕಾರುಗಳನ್ನು ನಿಲ್ಲಿಸಬಹುದಾದ ವಿಶಾಲವಾದ ಪಾರ್ಕಿಂಗ್ ಲಾಟ್ ಇದೆ.

ಪ್ರಿಕೆಸ್ಟೋಲನ್ ಚಾರಣ ಮತ್ತು ಅದರ ಮೇಲೆ ಮೇಲೆ ನಿಲ್ಲುವ ಭಯ ತಪ್ಪಿಸಲು ಕೆಲವು ಪ್ರವಾಸಿಗಳು ಕ್ಜೆರಾಗ್ ಕೋಡುಗಲ್ಲನ್ನು ನೋಡಲು ಬರುತ್ತಾರೆ. ಸಮುದ್ರಮಟ್ಟದಿಂದ 1100 ಮೀಟರ್ ಎತ್ತರವಿರುವ ಕ್ಜೆರಾಗ್ ಪರ್ವತ ಲಿಸ್ಫೆಜೋರ್ಡನ್ ನಗರದಿಂದ 42 ಕಿ.ಮೀ. ದೂರದಲ್ಲಿದೆ. ಲಿಸ್ಫೆಜೋರ್ಡನ್ ನಗರದ ಬಳಿ ಫ್ಲೋರ್ಲಿ ಎಂಬ ಹಳೆಯ ಪವರ್ ಪ್ಲಾಂಟ್ ಕೇಂದ್ರದ ಚಾರಣ ಕೂಡಾ ಒಂದು ಆಕರ್ಷಣೆಯಾಗಿದೆ. ಇಲ್ಲಿಗೆ ತಲುಪಲು 4444 ಮರದ ಪಾವಟಿಗೆಗಳನ್ನು ಹತ್ತಿ ಬೆಟ್ಟದ ತುದಿ ತಲುಪಬೇಕಾಗುತ್ತದೆ.

'ಮಿಶನ್ ಇಂಪಾಸಿಬಲ್ – ಫಾಲ್‌ಔಟ್' ಚಲನಚಿತ್ರದಲ್ಲಿ ನಾಯಕ ಟಾಮ್ ಕ್ರೂಸ್ ಪ್ರಿಕೆಸ್ಟೋಲನ್ ಕೋಡುಗಲ್ಲು ಹತ್ತುವುದನ್ನು ಚಿತ್ರಿಸಲಾಗಿದೆ. 'ಕೋ' ಎಂಬ ತಮಿಳು ಚಿತ್ರದ ಒಂದು ಹಾಡನ್ನು ಈ ಕೋಡುಗಲ್ಲಿನ ಮೇಲೆ ಚಿತ್ರಿಸಲಾಗಿದೆ.

ಪ್ರತಿಕ್ರಿಯಿಸಿ: feedback@sudha.co.in

